ಎಂ ವಿ ಸಿ ನಂ. 93/2023
ಪಿ ಡಬ್ಲ್ಯು: 1
ದಿನಾಂಕ 17-04-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: **3** ನೇ ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:</u>

ಅಪಘಾತವಾದ ದಿನ ನಾನು ಬೈಕಿನಲ್ಲಿ ಹೋಗುತ್ತಿದ್ದೇನು. ಸದರಿ ಬೈಕು ನನ್ನ ಮಗ ಶಶಿಕುಮಾರ್ ಗೆ ಸೇರಿದ್ದಾಗಿರುತ್ತದೆ. ಸದರಿ ಬೈಕನ್ನು ಅಪಘಾತದ ದಿನ ನನ್ನ ಸಹೋದರರಾದ ಮಂಜುನಾಥರವರು ಚಾಲನೆ ಮಾಡುತ್ತಿದ್ದರು. ಪ್ರಸ್ತುತ ಪ್ರಕರಣದಲ್ಲಿ ಬೈಕಿನ ಮಾಲೀಕರಾದ ಶಶಿಕುಮಾರ್ ಮತ್ತು ಚಾಲಕರಾದ ಮಂಜುನಾಥರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ಬೈಕು ನನ್ನ ಮಗನಿಗೆ ಸೇರಿದ್ದು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಸಹೋದರ ಮಂಜುನಾಥರವರಿಗೆ ಬೈಕನ್ನು ಚಾಲನೆ ಮಾಡಲು ಸೂಕ್ತ ಚಾಲನಾ ಪರವಾನಿಗಿ ಇತ್ತು, ಅದನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಪಘಾತದ ಸಮಯದಲ್ಲಿ ಸದರಿ ದ್ವಿಚಕ್ರ ವಾಹನಕ್ಕೆ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಚಾಲನಾ ಪರವಾನಿಗಿ ಇಲ್ಲದೆ ಇದ್ದುದರಿಂದ ಮತ್ತು ನನ್ನ ಮಗ ಬೈಕಿಗೆ ವಿಮೆ ಇಲ್ಲದೆ ಇದ್ದುದರಿಂದ ದುರುದ್ದೇಶದಿಂದ ಅವರನ್ನು ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

2. ಲಾರಿ ಸಂಖ್ಯೆ ಎಪಿ-39 ಯುಎ-7422 ರ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಅಪಘಾತವು ನನ್ನ ತಮ್ಮನ ನಿರ್ಲಕ್ಷತನದ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಚಾಲನಾ ಪರವಾನಿಗಿ ಇಲ್ಲದೆ ನನ್ನ ತಮ್ಮ ದ್ವಿಚಕ್ರ ವಾಹನ ಚಾಲನೆ ಮಾಡಿ ಅಪಘಾತ ಪಡಿಸಿದ್ದರಿಂದಲೇ ನಾನು 10 ದಿನ ತಡವಾಗಿ 1ನೇ ಎದುರುದಾರರ ವಾಹನದ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಪಘಾತವಾದ ನಂತರ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ 2ನೇ ಎದುರುದಾರರ ವಾಹನದ ಚಾಲಕನಿಂದ ಅಂದರೆ 1ನೇ ಎದುರುದಾರರಿಂದ ಯಾವುದೇ ತಪ್ಪಾಗದೆ ಇದ್ದರೂ ಸಹ ಪೋಲೀಸರು ಜತೆ ಷರೀಕ್ಕಾಗಿ ನಿಪಿ-2ರಂತೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಲಾರಿಯು ನಾನು ಪ್ರಯಾಣ ಮಾಡುತ್ತಿದ್ದ ದ್ವಿಚಕ್ರ ವಾಹನಕ್ಕೆ ಅಪಘಾತ ಪಡಿಸಿರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಲಾರಿ ಮತ್ತು ದ್ವಿಚಕ್ರ ವಾಹನದ ನಡುವೆ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮನ ಸ್ವತಪ್ಪಿನಿಂದ ನಾನು ದ್ವಿಚಕ್ರ ವಾಹನದಿಂದ ಬಿದ್ದು ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ವೆಚ್ಚಕ್ಕಾಗಿ 10 ಲಕ್ಷ ರೂ ಖರ್ಚು ಮಾಡಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಯ ನಂತರ ನನಗೆ ಅಪಘಾತದಿಂದ ಆದ ಗಾಯಗಳು ವಾಸಿಯಾಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಇಂದಿಗೂ ಸಹ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

3. ನಿಪಿ-98 ರ ಆಧಾರ್ ಕಾರ್ಡಿನಂತೆ ನನ್ನ ಜನ್ಮ ದಿನಾಂಕ 29/01/1963 ಆಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-98 ರ ದಾಖಲೆಯ ಪ್ರಕಾರ ನನಗೆ ಸುಮಾರು 60 ವರ್ಷಕ್ಕಿಂತ ಹೆಚ್ಚು ವಯಸ್ಸಾಗಿದೆ ಎಂದರೆ ಸಾಕ್ಷಿ 58 ಅಥವಾ 60 ಇರಬಹುದು ಎಂದು ನುಡಿಯುತ್ತಾರೆ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ಅರ್ಜಿಯಲ್ಲಿ ನನ್ನ ವಯಸ್ಸನ್ನು 50 ವರ್ಷ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ 51 ವರ್ಷ ಎಂದು ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಕಾಣಿಸಿರುವಂತೆ 3 ನೇ ಎದುರುದಾರರು 2 ನೇ ಎದುರುದಾರರ ವಾಹನವಾದ ಎಪಿ-39 ಯುಎ-7422 ರ ಲಾರಿಗೆ ಅಪಘಾತದ ದಿನಾಂಕಕ್ಕೆ ಯಾವುದೇ ವಿಮೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ 1 ನೇ ಎದುರುದಾರರಿಗೆ ಲಾರಿಯನ್ನು ಚಾಲನೆ ಮಾಡಲು ಸೂಕ್ತವಾದ ಚಾಲನೆ ಪರವಾನಿಗಿ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪರಿಹಾರ ಕೋರಿ ಅರ್ಜಿಯನ್ನು ಕಾಲಮಿತಿ ಒಳಗೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ವಿಳಂಬವನ್ನು ಮನ್ನಣೆ ಮಾಡಲು ಸೂಕ್ತವಾದ ಅರ್ಜಿಯನ್ನು ಸಲ್ಲಿಸಿಲ್ಲ

ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ನನ್ನ ಅರ್ಜಿ ಮಾನ್ಯವಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ರ ದಾಖಲೆಯನ್ನು ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10 ರಂತೆ ನನಗೆ ಶೇಕಡಾ 72 ರಷ್ಟು ಅಂಗನ್ಯೂನ್ಯತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಊಟ ಮಾಡಲು ಸಹ ಬರುವುದಿಲ್ಲ ಎಂದು ನುಡಿಯುತ್ತಾರೆ. ಶೇಕಡಾ 72 ರಷ್ಟು ಅಂಗನ್ಯೂನ್ಯತೆಯನ್ನು ರುಜುವಾತುಪಡಿಸಲು ನಿಪಿ-10 ರ ದಾಖಲೆಯಲ್ಲಿ ಯಾವುದೇ ಸೂಕ್ತ ವಿವರಣೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-13 ರಿಂದ 89 ರ ದಾಖಲೆಗಳನ್ನು ಈ ಕೇಸಿಗಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪ್ರಸ್ತುತ ಅರ್ಜಿ ಕಾಲವಿಳಂಬ ಮಾಡಿ ಸಲ್ಲಿಸಿರುವುದರಿಂದ ಮಾನ್ಯವಾಗತಕ್ಕದಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.